ಸಲ ಬರೆದದ್ದನ್ನು ಓದುವಾಗ ಅವರ ಸಲಹೆ ಕೇಳಬೇಕೆನಿಸುತ್ತದೆ. ಅವರಿಗೊಂದು ಟೆಲಿಗ್ರಾಂ ಕಳುಹಿಸುತ್ತೇನೆ. 'ಹ್ಯಾಂ ನೀವು ಹೇಳಿದ್ದು ಸರಿ ಇರಬಹುದು. ಇನ್ನೊಂದು ಸಲ ಆ ರೀತಿ ಹೇಳಬೇಡಿ. ಹೇಳಿದರೆ ನಿಮ್ಮ ಜೊತೆ ಮಾತಾಡೋದಿಲ್ಲ' ಅಂತ. ಎರಡು ವರ್ಷಗಳ ಕೆಳಗೆ ಹ್ಯಾಂಪ್ಟನ್ಸ್‌ನಲ್ಲಿ ಅವರ ಮನೆಗೆ ಹೋಗಿದ್ದೆ. ಊಟದ ಟೇಬಲ್‌ನಲ್ಲಿ ಆ ಕಡೆ ತುದಿಯಲ್ಲಿ ಕೂತಿದ್ದೆ. ಸುಮಾರು ಹದಿನಾಲ್ಕು ಜನರಿದ್ದೆವು. ಪಕ್ಕದಲ್ಲಿ ಕೂತಿದ್ದ ಯಾರಿಗೋ ನಾನು ಆ ಸಂಪಾದಕರಿಗೆ ಟೆಲಿಗ್ರಾಂ ಕಳುಹಿಸಿದ್ದೆ ಅಂತ ಹೇಳಿದೆ. ಟೇಬಲ್‌ನ ಮತ್ತೊಂದು ತುದಿಯಲ್ಲಿ ಕೂತಿದ್ದ ಸಂಪಾದಕ 'ಅದನ್ನೆಲ್ಲ ಭದ್ರವಾಗಿ ಇಟ್ಟಿದಿನಿ' ಅಂದ. ಪಾಪಿ! ನಾವು ಬರೆದದ್ದನ್ನು ಸಂಪಾದಕರು ನೋಡುವ ಮುಂಚೆ ನಾವೊಮ್ಮೆ ತಿದ್ದಬೇಕು.

◆ ಐದು ಆತ್ಮಚರಿತ್ರೆಗಳನ್ನು ಒಂದರ ಹಿಂದೆ ಒಂದರಂತೆ ಪ್ರಕಟಿಸಿರುವಿರಿ. **I Know Why the Caged Bird Sings** ಬರೆಯಲು ಆರಂಭಿಸಿದಾಗ ಹೀಗೆ ಆಗುತ್ತದೆ ಅಂತ ಊಹಿಸಿದ್ದಿರಾ?

ಹೌದು. ಆದರೆ, ಹಾಗಾಗುತ್ತೆ ಅಂದುಕೊಂಡಿರಲಿಲ್ಲ. **Caged Bird** ಬರೆಯುತ್ತೇನೆ. ಆಮೇಲೆ ಎಂದಿನಂತೆ ನಾಟಕ ಹಾಗೂ ಟಿವಿಗಳಿಗೆ ಸ್ಕ್ರಿಪ್ಟ್ ಬರೆಯಲು ವಾಪಸ್ಸಾಗುತ್ತೇನೆ ಅಂದುಕೊಂಡೆ. ಆದರೆ, ಈ ಆತ್ಮಚರಿತ್ರೆ ಎನ್ನುವುದು ಬಹಳ ಪ್ರಲೋಭನೆ ಒಡ್ಡುತ್ತದೆ. ಅದೊಂದು ಅದ್ಭುತ ಅನುಭವ. ಅದನ್ನು ಬರೆಯಲು ಶುರುಮಾಡಿದ ಮೇಲೆ ಫ್ರೆಡೆರಿಕ್ ಡೌಗ್ಲಾಸ್‌ನ ರೀತಿಯನ್ನು, ಅಂದರೆ ಗುಲಾಮರ ಕಥನ ನಿರೂಪಣಾ ತಂತ್ರವನ್ನೇ ಅನುಸರಿಸುತ್ತಿದ್ದೇನೆ ಅಂತ ಅರ್ಥವಾಯಿತು. 'ನಾನು' ಎಂದಾಗಲೆಲ್ಲ ಅದು 'ನಾವು' ಎಂದು ಧ್ವನಿಸುತ್ತಿತ್ತು. ಇಪ್ಪತ್ತನೆಯ ಶತಮಾನಕ್ಕೆ ಹೊಂದುವಂತೆ ಆ ಶೈಲಿಯನ್ನು ಬದಲಿಸಿ ಅದನ್ನು ಇನ್ನಷ್ಟು ವಿಸ್ತರಿಸಿ ಸೂಕ್ಷ್ಮವಾಗಿಸುವ ದೊಡ್ಡ ಸವಾಲು ನನ್ನೆದುರಿಗಿತ್ತು. ಇಲ್ಲಿಯವರೆಗೆ ಐದು ಪುಸ್ತಕಗಳನ್ನು ಬರೆದಿದ್ದೇನೆ. ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಆ ಪುಸ್ತಕಗಳನ್ನು ಓದಿದ್ದಾರೆ. ಬೀದಿಯಲ್ಲೋ ಏರ್‌ಪೋರ್ಟಿನಲ್ಲೋ ನನ್ನ ನೋಡಿ ಮಾತಾಡಿಸಲು ಬಂದವರು, 'ಮಿಸ್ ಏಂಜೆಲೊ ನಿಮ್ಮ ಪುಸ್ತಕಗಳನ್ನು ಕಳೆದ ವರ್ಷ ಓದಿದೆ. ನಾನು ಬರೆದಂತೆ ಇದೆ.' ಅಂತ ಹೇಳುತ್ತಾರಲ್ಲ ಅದು ನನಗೆ ಸಿಕ್ಕಿರುವ ಇಲ್ಲಿಯವರೆಗಿನ ಅತ್ಯುತ್ತಮ ಪ್ರಶಂಸೆ. ವ್ಯಕ್ತಿಯೊಬ್ಬ ಪರಿಪೂರ್ಣವಾಗಿ ಅದು ಯಾರೇ ಆಗಿರಲಿ, ಅವನೋ ಇಲ್ಲ ಅವಳೋ, ಕರಿಯನೋ ಇಲ್ಲ ಬಿಳಿಯನೋ ಅವರಿಗೆ ಅದು ತಮ್ಮ ಕತೆ ಅನ್ನಿಸಬೇಕು. ಅದೇ ರೀತಿ ಬರೆದೆ. ಮೊದಲಿಗೆ ಈ ಪ್ರಕಾರದ ಬರವಣಿಗೆಯನ್ನು ಮುಂದುವರೆಸುತ್ತೇನೆ ಅಂದುಕೊಂಡಿರಲಿಲ್ಲ. ಒಂದು ಚಿಕ್ಕ ಪುಸ್ತಕ ಬರೆದು ಮುಗಿಸಿ ಮರಳಿ ಪದ್ಯ, ಸಂಗೀತದ ಕಡೆ ಹೊರಳಿಬಿಡುತ್ತೇನೆ ಅಂದುಕೊಂಡಿದ್ದೆ.

◆ ಮೊದಲ ಪುಸ್ತಕದ ಬರವಣಿಗೆ ಹೇಗೆ ಆರಂಭವಾಯಿತು? ಅದಕ್ಕೆ ಪ್ರೇರಣೆ ನೀಡಿದ್ದು ಯಾರು?

ನನ್ನ ಚಿಕ್ಕಂದಿನಲ್ಲಿ ಬರವಣಿಗೆ ಆರಂಭಿಸುವುದಕ್ಕೂ ಮುನ್ನ ಹಲವು ವರ್ಷಗಳ ಕೆಳಗೆ ಇದು ಮೊದಲಾಯಿತು. ಅರ್ಕಾನ್ಸಾಸ್‌ನ ನಮ್ಮ ಚರ್ಚಿನ ಅಮೆರಿಕನ್ ಕರಿಯ ಪ್ರವಾಚಕರನ್ನು ಬಹಳ ಇಷ್ಟಪಡುತ್ತಿದ್ದೆ. ಅವರ ಧ್ವನಿ, ಬಳಸುತ್ತಿದ್ದ ಪ್ರತಿಮೆಗಳು ಬಹಳ ಆಕರ್ಷಕವಾಗಿದ್ದವು. ನಾನಾಗ ಬಹಳ ಚಿಕ್ಕವಳು. ದೇವರು ಹೊರಗಡಿಯಿಟ್ಟ, ಸೂರ್ಯ ಆತನ ಬಲಭುಜದ ಮೇಲಿಂದ ಬಂದ, ಆತನ ಅಂಗೈಯಲ್ಲಿ ಚಂದ್ರ ಹೊಳೆಯುತ್ತಿದ್ದ – ಅವರ ವಾಕ್ಯಗಳು ಹೀಗಿರುತ್ತಿದ್ದವು. ಅವು ಬಹಳ ಇಷ್ಟವಾಗುತ್ತಿದ್ದವು. ಕಪ್ಪು ಕವಿಗಳನ್ನು ಇಷ್ಟಪಡುತ್ತಿದ್ದೆ. ಶೇಕ್ಸ್‌ಪಿಯರ್, ಎಡ್ಗರ್ ಅಲನ್ ಪೋ, ಮ್ಯಾಥ್ಯೂ ಅರ್ನಾಲ್ಡ್ ಇಷ್ಟವಾಗುತ್ತಿದ್ದರು. ಹಲವು ವರ್ಷಗಳ ಕಾಲ ಮೌನವಾಗಿದ್ದಾಗ ಓದುತ್ತಿದ್ದೆ, ಮನನ ಮಾಡಿಕೊಳ್ಳುತ್ತಿದ್ದೆ. ಈ ಎಲ್ಲರ ಪ್ರಭಾವವು ನನ್ನ ಮೊದಲ ಪುಸ್ತಕದಿಂದ ಹಿಡಿದು ಇತ್ತೀಚಿನ ಪುಸ್ತಕದವರೆಗೆ ಎಲ್ಲದರ ಮೇಲೂ ಇದೆ.